ವೀಳ್ಯ ಅಡಿಕೆಗೆ ದುಡ್ಡು ಕೊಡಿ, ಸಾಕು ಅಂತಾನೆ. ನೀನು ಬೇಕಾದ್ರೆ ಒಂದು ಮಾತು ಕೇಳಿ ನೋಡು" ಎಂದರು ಅಪ್ಪ. ಅಮ್ಮ ನಂಬದವಳಂತೆ ಅವರ ಕಡೆ ತಿರುಗಿ ನೋಡಿದರು. "ನೀವು ಕಲ್ಲನ್ನ ತೋರಿಸಿದರೆ, ಕೆಲಸ ಶುರು ಮಾಡ್ತೀನಿ" ಎಂದರು.

ಆಗ ನೆನಪಾದಂತೆ ಅಮ್ಮ ಅಪ್ಪನನ್ನು ನೋಡಿದಳು. "ನನ್ನನ್ನ ನೋಡಿದ್ರೆ, ನಾನು ಏನು ಅಂಗಡಿಗೆ ಹೋಗಿ ಕಲ್ಲು ತರ್ತೇನೇನು? ತೋಟದಲ್ಲಿ ಬಿದ್ದಿದೆಯಲ್ಲ, ಆ ಕಲ್ಲುಗಳನ್ನೇ ತಗೋಬೇಕು" ಎಂದರು ಅವರು. "ಅಯ್ಯೋ ಅದು ಬಟ್ಟೆ ಒಗೆಯೋ ಕಲ್ಲುಗಳು" ಎಂದು ಅಮ್ಮ ಗಾಬರಿಯಾದರು.

ಕೊಟ್ಟಿಗೆಯಿಂದ ಸಂಭಾಷಣೆಗಳನ್ನು ಕೇಳುತ್ತಿದ್ದ ಅತ್ತೆ, ತಕ್ಷಣ ಹೊರಗೆ ಬಂದು ಇಣುಕಿ ನೋಡಿದರು. ಅಪ್ಪ 'ಅದಕ್ಕೆ ಯಾಕೆ ಹೀಗೆ ಕಿರುಚಾಡ್ತಾ ಇದ್ದೀಯಾ? ಒಂದೇ ಸಮಯಕ್ಕೆ ನಾಲ್ಕು ಕಲ್ಲಲ್ ಬಟ್ಟೆ ಒಗೀತೀರಾ? ಎರಡು ನೀವು ಇಟ್ಕೊಳ್ಳಿ, ಇನ್ನೆರಡರಲ್ಲಿ ತೊಟ್ಟಿ ಮಾಡ್ಲಿ. ಗಾಡಿಯವನು ಬರೋ ದಿನ, ಇನ್ನು ಎರಡೋ ಮೂರೋ ಕಲ್ಲುಗಳನ್ನು ತಂದು ಹಾಕಿದ್ರೆ ಆಯ್ತು" ಎಂದು ಸಹಜವಾಗಿ ಹೇಳಿ ಅಮ್ಮನ ಮುಖವನ್ನು ನೋಡಿದರು. ಅಮ್ಮ ಒಂದು ಕ್ಷಣ ಯೋಚಿಸಿ, ನಂತರ "ಸರಿ, ನಿಮ್ಮ ಇಷ್ಟದಂತೆ ಆಗಲಿ" ಎಂದು ಮುಗಿಸಿದರು. "ಇನ್ನೇನು ಹೋಗಿ ಕೆಲಸ ಶುರು ಮಾಡು" ಎಂದು ತೊಟ್ಟಿಯವನ ಬಳಿ ಹೇಳಿ ಅಪ್ಪ ಹೊಸಿಲಿಗೆ ಬಂದರು.

ತನ್ನ ದೇಹ ಚುರುಕಾದಂತೆ, ಹೂವರಸಿ ಮರದ ನೆರಳಿನಲ್ಲಿ ಬಿದ್ದಿದ್ದ ದೊಡ್ಡ ಕಲ್ಲುಗಳ ಬಳಿ ಹೋದರು ತೊಟ್ಟಿ ಮಾಡುವವರು. ಕಣ್ಣಲ್ಲೇ ಒಮ್ಮೆ ಅದನ್ನು ಅಳೆದು, ಕಲ್ಲುಗಳ ಪಕ್ಕದಲ್ಲಿ ಗೋಣಿ ಚೀಲವನ್ನು ಇಳಿಸಿಟ್ಟರು. ನಂತರ ಅಮ್ಮನ ಪಕ್ಕ ತಿರುಗಿ, "ಏನಾದ್ರೂ ಹಳೇ ಗಂಜಿ ಇದ್ರೆ ಕೊಡಿ ತಾಯಿ, ಹೊಟ್ಟೆ ಚುರ್ರಂತಿದೆ" ಎಂದು ನಮಸ್ಕಾರ ಮಾಡಿದರು. ಅಮ್ಮ ನನ್ನ ಬಳಿ "ಆ ಆಸಾಮಿಗೆ ಬಾಳೆ ಮರ ತೋರಿಸೋ. ಒಂದು ಎಲೆ ಕುಯ್ಕೋಂಡು ಬಂದು ಕೂರೋದಿಕ್ಕೆ ಹೇಳು" ಎಂದು ಹೇಳಿ ಒಳಗೆ ಹೋದರು.

"ಅತ್ತಿಗೆ ಇನ್ನೂ ನಾನು ಅಕ್ಕನೂ ಊಟ ಮಾಡಿಲ್ಲ. ಎಲ್ಲಾ ಹಾಕಿಬಿಡಬೇಡಿ" ಎಂದು ಕೊಟ್ಟಿಗೆಯಲ್ಲಿದ್ದ ಎರಡನೇಯ ಅತ್ತೆ ದನಿ ಎತ್ತಿದಳು.

ತೊಟ್ಟಿ ಮಾಡುವವರು ಎಲೆಯನ್ನು ಕುಯ್ದುಕೊಂಡು ಬಂದಮೇಲೆ ನಾನು ನೀರು ಸುರಿದೆ. ಅವರು ಅದನ್ನು ಶುದ್ಧವಾಗಿ ತೊಳೆದು ಒದರಿದರು. ನಂತರ ಕೈಕಾಲುಗಳನ್ನು ತೊಳೆದುಕೊಂಡು ಬಂದು ಮರದಡಿಯಲ್ಲಿ ಕುಳಿತರು. ಮೆಲ್ಲಗೆ ಎಲೆಯ ನರವನ್ನು ಅದುಮಿ ನೆಲದ ಮೇಲೆ ಸಮನಾಗಿ ಹರಡಿಕೊಳ್ಳುವಂತೆ ಮಾಡಿದರು.

ಕುಂಡದಲ್ಲಿ ಅನ್ನ ತೆಗೆದುಕೊಂಡು ಬಂದ ಅಮ್ಮ, ಅದನ್ನು ಹಾಗೆಯೇ ಎಲೆಯಲ್ಲಿ ಬಡಿಸಿ, ಒಣ ಮೀನಿನ ಸಾರನ್ನು ಹುಯ್ದಳು. ಸಾರಿನ ವಾಸನೆಗೆ ನಾಲಿಗೆಯಲ್ಲಿ ನೀರೂರಿತು.

"ಒಣ ಮೀನೇನು ?" ಎಂದು ಮೂಗರಳಿಸಿ ಅವರು ಕೇಳಿದರು. ಆಶ್ಚರ್ಯದಿಂದ ಅವರನ್ನು ನೋಡುತ್ತ ಅಮ್ಮ ಮನೆಯೊಳಗೆ ಹೋದರು. ಅನ್ನವನ್ನು ಸಾರನ್ನು ಚೆನ್ನಾಗಿ ಕಲಸಿ ಬಾಚಿ ಸಂತೃಪ್ತಿಯಿಂದ ತಿಂದರು. ಅದನ್ನು ನೋಡಿದಾಗಲೆ ನನಗೆ ಹಸಿವಾಗುವುದು ನೆನಪಾಯಿತು. ಅದರ ಜತೆಗೆ ಶಾಲೆಯ ನೆನಪೂ ಆಯಿತು.

ಚಟ್ ಎಂದು ಸ್ನಾನದ ಕೋಣೆಗೆ ಓಡಿದೆ. ಅವಸರವಾಗಿ ನೀರನ್ನು ತೆಗೆದು ತಲೆಮೇಲೆ ಸುರಿದುಕೊಂಡು ಸ್ನಾನವನ್ನು ಮುಗಿಸಿದೆ. ನನ್ನ ವೇಗವನ್ನು ನೋಡಿ ಅತ್ತೆಯಿಂದ ಆಶ್ಚರ್ಯವನ್ನು ಅಡಗಿಸಲಾಗಲಿಲ್ಲ. "ಏನೋ ಈವತ್ತು ಹೆಚ್ಚಾಗಿ ನಾಲ್ಕೈದು ಕೈಕಾಲು ಮೊಳೆತಿದೆಯೇ? ಇಷ್ಟೊಂದು ಚುರುಕಾಗಿದ್ಯಾ, ಇಷ್ಟು ದಿನ ಇವೆಲ್ಲ ಎಲ್ಲಿ ಅವಿತ್ಕೊಂಡಿತ್ತೋ?" ಎಂದು ನಗುತ್ತ ಕೇಳಿದರು.